**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮಾನವಿ.**

**C.C. No. 1035/2021**

CW-1
PW-1

ಸಾಕ್ಷಿದಾರರ ಹೆಸರು : ಚಂದ್ರಶೇಖರ

ತಂದೆಯ ಹೆಸರು : ಈರಣ್ಣ

ವಯಸ್ಸು : 25 ವರ್ಷ

ಉದ್ಯೋಗ : ಒಕ್ಕಲುತನ

ವಾಸ ಸ್ಥಳ : ಬೈಲ ಮರ್ಚೇಡ್

ದಿನಾಂಕ 20.05.2024 ರಂದು ಸತ್ಯ ಪ್ರತಿಜ್ಞಾವಿಧಿಯನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ಮೃತ ಈರಣ್ಣ ನನ್ನ ತಂದೆ. ದಿಃ 13-01-2021 ರಂದು ಬೆ.5.00 ಗಂಟೆ ಸುಮಾರಿಗೆ ಮೃತ ನನ್ನ ತಂದೆ ಬಹಿರದಸೆ ಕುರಿತು ಹೊರಗೆ ಹೋಗಿ, ರಸ್ತೆ ಎಡಭಾಗಕ್ಕೆ ಬರುವಾಗ, ಒಂದು ಕ್ರಷರ್ ವಾಹನ ರಸ್ತೆಯ ಬಲಗಡೆಗೆ ಚಲಾಯಿಸಿ ನಮ್ಮ ತಂದೆಗೆ ಡಿಕ್ಕಿ ಪಡಿಸಿರುತ್ತದೆ. ಅದರಿಂದ ನನ್ನ ತಂದೆ ಕಾಲು ಮತ್ತು ಇತರ ಕಡೆ ಭಾರಿ ಪ್ರಮಾಣದ ಗಾಯಗಳು ಆಗಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ನಾನು, ಚಾಸಾ-14 ಸದರಿ ಅಪಘಾತವನ್ನು ನೋಡಿರುತ್ತೇವೆ. ಅಪಘಾತ ಪಡಿಸಿದ ನಂತರ ಕೃಷರ್ ವಾಹನ ಪಲ್ಟಿಯಾಗಿರುತ್ತದೆ. ಕ್ರಷರ್ ವಾಹನದಲ್ಲಿ ಇದ್ದ ಪ್ರಯಾಣಿಕರಿಗೆ ಗಾಯಗಳು ಆಗಿರುತ್ತವೆ. ಅಪಘಾತವು ಕೃಷರ್ ವಾಹನದ ಚಾಲಕನ ತಪ್ಪಿನಿಂದ ಆಗಿರುತ್ತದೆ. ಅವರ ಹೆಸರು ವಿವೇಕ ಎಂದು ಗೊತ್ತಾಯಿತು. ಆ ಬಗ್ಗೆ ನಾನು ದೂರು ನೀಡಿರುತ್ತೇನೆ. ನಾನು ನೀಡಿದ ದೂರು ನೋಡುತ್ತಿದ್ದು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು

ಗುರುತಿಸಲಾಯಿತು. ಆ ದಿನ ಅಪಘಾತ ಪಡಿಸಿದ ವಾಹನಕ್ಕೆ ಇದ್ದ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರು ಇದ್ದು ವಕೀಲರು ಅರ್ಜಿ ಸಲ್ಲಿಸಿ ಆರೋಪಿತನ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ ಶ್ರೀ. ವಿ.ಎ.ಪಿ ವಕೀಲರು ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಯಾವುದೇ ಕಾರಣಗಳು ಇಲ್ಲದೇ ಇರುವುದರಿಂದ ವಕೀಲರ ಪ್ರಾರ್ಥನೆ ತಳ್ಳಿ ಹಾಕಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ನನ್ನ ಉಕ್ತಲೇಖದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ.)

ಓ.ಹೇ.ಕೆ.ಸರಿ ಇದೆ

**ಪ್ರ.ದ.ನ್ಯಾದಂ.ಗಳು, ಮಾನ್ವಿ**